# ದಿನಚರಿ



## ಧರ್ಮ ಜ್ಯೋತಿ



ಹರಿಹರಪುರ ಬಿ.ಸುಬ್ರಮಣ್ಯಂ, ಅರಕೆರೆ ಗ್ರಾಮ, ಐಐಎಂ ಅಂಚೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ದೂರವಾಣಿ– 080 26585578

### ಆಚಾರ–ವಿಚಾರಗಳ ನಡುವೆ ಹೊಂದಾಣಿಕೆ ಇರಬೇಕೇಕೆ?

ತುಂಬಾ ಗಹನವಾದ ಅರ್ಥವನ್ನುಳ್ಳ ಈ ಅವಳಿ ಶಬ್ದಗಳಲ್ಲಿ ಮೊದಲನೆಯದಾದ "ಆಚಾರ" ಎಂದರೆ ಕೇವಲ ಮಡಿ–ಮೈಲಿಗೆ, ಜಪ–ತಪ, ಅನುಷ್ಠಾನಗಳೆಂದೂ ಅವುಗಳಲ್ಲಿಯೇ ನಿರತರಾಗಿ ಕಾಲಕಳೆಯುವವರೇ ಆಚಾರವಂತರು ಎಂದು ಗುರುತಿಸುವುದುಂಟು. ಧಾರ್ಮಿಕ ದೃಷ್ಟಿಯಿಂದ ಅದು ಸರಿಯಿರಲೂಬಹುದು. ಆದರೆ ಮಾನವನ ಎಲ್ಲ ನಡವಳಿಕೆಗಳೂ "ಆಚಾರ" ಶಬ್ದದ ವ್ಯಾಪ್ತಿಯಲ್ಲಿಯೇ ಬರುತ್ತದೆ. ಈ ಆಚಾರ ಶಬ್ದಕ್ಕೆ ಹೊಂದಿಕೊಂಡೇ ಇರುವುದು "ವಿಚಾರ" ವೆಂಬ ಪದ. ಇವುಗಳ ಹೊಂದಾಣಿಕೆ ಬಲುಚಂದ. ನಮ್ಮ ಆಚಾರಗಳು ವಿಚಾರಪೂರ್ಣವಾಗಿರಬೇಕೆಂಬುದೇ ಆ ಚಂದದ ಹೊಂದಾಣಿಕೆ. ನಾವು ಪ್ರತಿದಿನ ಮುಂಜಾನೆ ಹಾಸಿಗೆಯಿಂದ ಎದ್ದು ಪುನಃ ರಾತ್ರಿ ಹಾಸಿಗೆ ಸೇರುವವರೆಗಿನ ನಮ್ಮ ದೈನಂದಿನ ನಡೆ–ನುಡಿಗಳೆಲ್ಲವೂ ಆ ಆಚಾರದ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ನಮ್ಮ ಆಚಾರವು ವಿಚಾರದ ಹಿನ್ನೆಲೆ ಹೊಂದಿರಬೇಕು. ನಮ್ಮ ಆಚಾರಗಳು ತ್ರಿಕರಣ ಶುದ್ಧಿಯಿಂದ ಕೂಡಿರಬೇಕು. ನಮ್ಮ ಮನಸ್ಸು–ಮಾತು–ಕೃತಿಗಳಲ್ಲಿ ಪರಿಶುದ್ಧತೆ ಏಕೀಭಾವ ಇರುವುದೇ ತ್ರಿಕರಣಶುದ್ಧಿ. ಇದನ್ನು ಅನುಸರಿಸಿ 'ನಡೆದುಕೊಳ್ಳುವವನು' ಸದಾಚಾರಿ. ವ್ಯತಿರಿಕ್ತವಾಗಿ ನಡೆಯುವವನು ದುರಾಚಾರಿ. ಮನಸ್ಸಿನಲ್ಲಿರುವುದನ್ನೇ ಮಾತಿನಲ್ಲಿ ವ್ಯಕ್ತಪಡಿಸಿ ಅದನ್ನೇ ಕಾರ್ಯರೂಪಕ್ಕೆ ತರುವವರು ಮಹಾತ್ಮರು. ದುರಾತ್ಮರಾದವರು ಮನಸ್ಸಿನಲ್ಲಿ ಯೋಚಿಸುವುದೇ ಒಂದು; ಮಾತಿನಲ್ಲಿ ಹೇಳುವುದು ಇನ್ನೊಂದು; ಕೃತಿಯಲ್ಲಿ ತರುವುದು ಮತ್ತೊಂದು. ಶಾಸ್ತ್ರಕ್ಕಿಂತ ಪದ್ಧತಿಯೇ ಬಲಿಷ್ಠವಾದುದು. ಇಲ್ಲಿ ವಿಚಾರಕ್ಕೆ ಎಡೆಯೇ ಇಲ್ಲ. ಇದಕ್ಕೊಂದು ಚಿಕ್ಕ ಉದಾಹರಣೆ:– ಪ್ರತಿ ಮನೆಯಲ್ಲಿಯೂ ಬೆಕ್ಕು ಸಾಕುವ ಕ್ರಮವಿದ್ದಾಗ ಮನೆಗಳಿಗೆ ತೊಂದರೆಯಾಗದಿರಲೆಂದು ಬೆಕ್ಕಿನ ಮೇಲೆ ಬುಟ್ಟಿಯೊಂದನ್ನು ಕವುಚಿ ಹಾಕಿ ಬಂಧನದಲ್ಲಿಡುತ್ತಿದ್ದರು. ಮುಂದೆ ಮನೆಯ ಬೆಕ್ಕು ತೀರಿ ಹೋಯಿತು. ಮನೆಯ ಹಿರಿಯರು ತೀರಿಕೊಂಡು ಮಕ್ಕಳು ಹಿರಿಯರು ಶ್ರಾದ್ಧ ಮಾಡುವಾಗ ಎಲ್ಲಿಂದಾದರೂ ಬೆಕ್ಕೊಂದನ್ನು ಹಿಡಿದು ತಂದು ಬುಟ್ಟಿಯೊಳಗೆ ಬಂಧಿಸಿಟ್ಟುಕೊಂಡೇ ಶ್ರಾದ್ಧ ಕರ್ಮ ನಡೆಸಲು ಪ್ರಾರಂಭಿಸಿದರು. ವಿಚಾರಹೀನ ಆಚಾರವೆಂದರೇ ಇದೇನೆಯೇ.

## ದಿನಕ್ಕೊಂದು ದೋಹಾ

### ಇಲ್ಲಿಂದಲೇ ಅಲ್ಲಿನ ಕನಸು ಕಂಡರೇನು ಸುಖ? 451

**ಪಹುಂಚೇಂಗೇ ತಬ್ ಕಹೈಗೆ, ಉಮಡೇಂಗೇ ಉಸ್ ಠಾಯ್**
**ಅಜಹೂ ಬೇರಾ ಸಮಂದ್ ಮೆ, ಬೋಲೀ ಬಿಗೂಚೈ ಕಾಯ್**

***ಅರ್ಥ:*** ಅಲ್ಲಿಗೆ ತಲುಪಿದ ಮೇಲಷ್ಟೇ ಅಲ್ಲಿ ಎಷ್ಟು ಆನಂದ ಸಿಗುತ್ತದೆ ಎಂದು ಹೇಳೋಣ. ಈಗಿನ್ನೂ ಸಮುದ್ರದ ಮಧ್ಯೆ ದಾಟುತ್ತಿರುವ ಕುರಿಗೆ ಯಾಕೆ ಹೇಳಬೇಕು ಆ ಬದಿಯ ಸುಖವನ್ನು?

***ತಾತ್ಪರ್ಯ:*** ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ ಎಂದು ದಾಸರು ಹೇಳಿರುವಂತೆ 'ಅಲ್ಲಿಗೆ' ಹೋಗುವುದೇ ನಮ್ಮ ಇಂದಿನ ಪರಮಗುರಿ. ಅದನ್ನು ಸ್ವರ್ಗವೆನ್ನಿ, ಪರಲೋಕವೆನ್ನಿ, ದೇವನ ಸಾನ್ನಿಧ್ಯ ಎನ್ನಿ, ಅದೇ ನಮ್ಮ ಅಂತಿಮ ಗುರಿ. ಈ ಇಹದಿಂದ ಆ ಪರವನ್ನು ಸೇರುವುದಕ್ಕಾಗಿಯೇ ನಾವು ಪ್ರತಿಕ್ಷಣವೂ ಸಿದ್ಧತೆ ನಡೆಸಬೇಕು. ಆದರೆ, ಆ ಕಾಣದ ಲೋಕ ಸೇರಲು ದೊಡ್ಡದಾದ ಭವದ ಅಂಬುಧಿಯನ್ನು ದಾಟಬೇಕು. ಇದನ್ನು ದಾಟುವುದು ಸುಲಭದ ಕೆಲಸವಲ್ಲ. ನಿರಂತರ ಹುಟ್ಟು ಹಾಕಬೇಕು, ಯಾವುದೇ ಸೆಳೆತ, ಸುಳಿಗಳಿಗೂ ಜಗ್ಗಬಾರದು. ಈ ಭವದಲ್ಲಿ ಈಸಿ ಜೈಸಿದವನು ಮಾತ್ರ ಆ ದಡವನ್ನು ಮುಟ್ಟಬಲ್ಲ. ಇಷ್ಟೆಲ್ಲ ದಾಟಿದ ಬಳಿಕವಷ್ಟೇ ಸ್ವರ್ಗ ಸುಖ ನಮಗೆ ಸಿಗುತ್ತದೆ. ಹೀಗೆ ಕೈಗೆಟಕುವ ಪರಲೋಕ ಎಷ್ಟು ಆನಂದದಾಯಕವಾಗಿರುತ್ತದೆ ಎಂದರೆ ಅದನ್ನು ವರ್ಣಿಸುವುದೇ ಕಷ್ಟ. ಆದರೆ, ಅದನ್ನು ಭವಸಾಗರ ದಾಟುತ್ತಿರುವ ಕುರಿಯಂತಹ ಮೂಢನಿಗೇಕೆ ಹೇಳಬೇಕು? ಹೇಳಿದರೆ ಆತನೀಗಲೇ ಅದರ ಕಲ್ಪನೆಯಲ್ಲಿ ತೇಲಿ ಹೋದಾನು, ಮುಂದಿನ ಪ್ರಯತ್ನ ಮಾಡುವುದನ್ನೇ ಕೈಬಿಟ್ಟಾನು ಎಂದು ಎಚ್ಚರಿಸುತ್ತಿದ್ದಾರೆ ಸಂತ ಕಬೀರ.

ಭವಾಬ್ಧಿ ದಾಟಬೇಕೆಂದರೆ ಇಲ್ಲಿ ಸತ್ಕಾರ್ಯಗಳನ್ನು ಮಾಡಿ ಪುಣ್ಯ ಸಂಪಾದಿಸಬೇಕು. ಈ ರೀತಿ ಕಷ್ಟಪಟ್ಟಾಗಲೇ ಸ್ವರ್ಗವೆಂಬ ಇಷ್ಟ ಸಿಗುವುದು. ಇದು ಸಿಗುವ ಮುನ್ನವೇ ಅಲ್ಲಿನ ಸುಖಾನುಭವವನ್ನು ಕೇಳುತ್ತ ಕೂತರೆ ಏನೇನೂ ಪ್ರಯೋಜನವಿಲ್ಲ. ಯಾವುದೇ ಉದ್ದೇಶ ಈಡೇರಬೇಕಾದರೂ ಅದಕ್ಕೆ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿಗಳು ಬೇಕು. ಸ್ವರ್ಗ ತಲುಪುವ ಇಚ್ಛೆ ಪೂರೈಸಿಕೊಳ್ಳಲೂ ಸತ್ಕಾರ್ಯಗಳನ್ನು ಕೈಗೊಳ್ಳುವ ಇಚ್ಛೆ ಇರಬೇಕು. ಯಾವುದೇ ಅಡೆತಡೆ ಬಂದರೂ ಅದನ್ನು ತುದಿಮುಟ್ಟಿಸಿ ಪುಣ್ಯ ಸಂಪಾದಿಸಿಕೊಳ್ಳುವ ದೃಢತೆ ಇರಬೇಕು. ಉತ್ತಮ ಕಾರ್ಯಗಳನ್ನು ಹೇಗೆ ಕೈಗೊಳ್ಳಬೇಕು ಎಂಬ ಜ್ಞಾನ ಇರಬೇಕು. ಇವಾವುವೂ ಇಲ್ಲದ ಕುರಿಯಂತಹ ವ್ಯಕ್ತಿಯ ಮುಂದೆ ಆ ಪರಮಗುರಿಯನ್ನು ವಿವರಿಸಿದರೆ ಅದು ವ್ಯರ್ಥವೇ ಆದೀತು. ಆದ್ದರಿಂದಲೇ ಭಗವಂತನ ಮೇಲೆ ಭಕ್ತಿಯಿಟ್ಟು, ಸತ್ಕಾರ್ಯಗಳನ್ನು ಮಾಡುತ್ತಾ ಸಾಗುವವನಿಗೆ ಮಾತ್ರ ಅಂತಿಮವಾಗಿ ಸ್ವರ್ಗ ಸಿಗುತ್ತದೆ. ಆ ಬಳಿಕವಷ್ಟೇ ಅಲ್ಲಿನ ಪರಮೋತ್ಕೃಷ್ಟ ಆನಂದದ ಅರಿವಾಗುತ್ತದೆ.

● ವಿದ್ಯಾ

**ದಿನಕ್ಕೊಂದು ಸಾಲು: ಜರ್ಮನಿಯಲ್ಲಿ ವಿದ್ಯಾರ್ಥಿನಿಲಯ ವ್ಯವಸ್ಥೆ ಆರಂಭವಾಗಿದ್ದು 1912 ರಲ್ಲಿ !**

## ಜನುಮ ದಿನ



### ಪಿ.ಬಿ.ಶ್ರೀನಿವಾಸ್

ಹಿರಿಯ ಗಾಯಕ. ರಾಜ್ ಕುಮಾರ್ ದನಿ ಆಗಿಯೇ ಜನಪ್ರಿಯ. ಎಂಟು ಭಾಷೆ ಬಲ್ಲ ಇವರು ಕನ್ನಡ, ತೆಲುಗು, ತಮಿಳು ಭಾಷೆಯ ಚಿತ್ರಗಳಲ್ಲಿ ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಹಾಡಿದ್ದಾರೆ. 1953ರಲ್ಲಿ ಬಂದ ಜಾತಕ ಫಲ ಚಿತ್ರದ ಮೂಲಕ ಗಾಯನ ಆರಂಭ. 1998ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

## ಇಂದಿನ ಪಂಚಾಂಗ

| | | | |
|---|---|---|---|
| ದಿನಾಂಕ | 22.09.09 | ನಕ್ಷತ್ರ | ಸ್ವಾತಿ |
| ವಾರ | ಮಂಗಳವಾರ | ಮಳೆ ನಕ್ಷತ್ರ | ಉತ್ತರ |
| ಸಂವತ್ಸರ | ಶ್ರೀವಿರೋಧಿ | ರಾಹುಕಾಲ | 03.00ರಿಂದ04.30 |
| ಋತು | ಶರತ್ | ಯಮಗಂಡಕಾಲ | 09.00ರಿಂದ 10.30 |
| ಮಾಸ | ಅಶ್ವಯುಜ | ಸೂರ್ಯೋದಯ(ನಾಳೆ) | 6.08 |
| ಪಕ್ಷ | ಶುಕ್ಲ | ಸೂರ್ಯಾಸ್ತ | 6.16 |
| ತಿಥಿ | ಚೌತಿ | ಅದೃಷ್ಟಸಂಖ್ಯೆ | 9,18,27 |

## ಬೆರಗು- ಬೆಡಗು

### ನಾನಾ ಭಗವಂತ!



ನಾನಾ ಪಾಟೇಕರ್ ಕನ್ನಡಕ್ಕೆ ಬರುವುದು ದಿಟವಾಗಿದೆ. 'ಲೂಸ್ ಮಾದ' ಯೋಗಿ ಅಭಿನಯದ 'ಯಕ್ಷ' ಎಂಬ ಹೊಸ ಚಿತ್ರದಲ್ಲಿ ನಾನಾ ನಟಿಸುತ್ತಾರೆಂಬ ಸುದ್ದಿ ಹಬ್ಬಿ 20ಕ್ಕೂ ಹೆಚ್ಚು ದಿನಗಳಾಗಿವೆ. ಆದರೆ, ಚಿತ್ರ ಇನ್ನೇನು ಮುಹೂರ್ತ ಆಚರಿಸಿಕೊಳ್ಳುವ ಹೊತ್ತಿನಲ್ಲಿ 'ದೈವಸ್ವರೂಪಿ'ಯಾಗಿ ನಾನಾ ಬರುವುದು ಖಂಡಿತವಾಗಿದೆ. ಈ ಚಿತ್ರದಲ್ಲಿ ಅವರು ಆಧುನಿಕ ಪರಶುರಾಮನ ಪಾತ್ರ ಮಾಡುತ್ತಿದ್ದಾರಂತೆ. ಅದೇನೆಂಬುದು ಸದ್ಯಕ್ಕೆ ಸಸ್ಪೆನ್ಸ್.

ಈ ಚಿತ್ರವನ್ನು ಚಿತ್ರರಂಗದಲ್ಲಿ ಸುಮಾರು 12 ವರ್ಷಗಳಿಂದಲೂ ಇರುವ ರಮೇಶ್ ರಾವ್, ಈಗ ಮೊದಲ ಬಾರಿಗೆ ರಮೇಶ್ ಭಾಗವತ್ ಆಗಿ ನಿರ್ದೇಶಿಸುತ್ತಿದ್ದಾರೆ. 'ದುನಿಯಾ' ನಂತರ ಚಿತ್ರನಿರ್ಮಾಣದಿಂದ ದೂರವೇ ಇದ್ದ ಯೋಗಿ ತಂದೆ ಟಿ.ಪಿ. ಸಿದ್ದರಾಜು ಈ ಚಿತ್ರ ನಿರ್ಮಿಸುತ್ತಿದ್ದಾರೆ. 'ಪೊರ್ಕಿ' ಚಿತ್ರದ ಮೂಲಕ ಅರಂಗೇಟ್ರಂ ಮಾಡಿರುವ ಪ್ರಣೀತಾ ಈ ಚಿತ್ರದ ನಾಯಕಿ.

ಕನ್ನಡ ಚಿತ್ರರಂಗದಿಂದ ಅಷ್ಟೆಲ್ಲಾ ಆಹ್ವಾನಗಳು ಹೋದರೂ, ಅವೆಲ್ಲವನ್ನೂ ನಾ ನಾ ಎಂದು ನಿರಾಕರಿಸುತ್ತಲೇ ಇದ್ದ ನಾನಾ ಪಾಟೇಕರ್, ಈ ಬಾರಿ ಒಪ್ಪಿದ್ದು ಹೇಗೆ ಎಂಬ ಆಶ್ಚರ್ಯ ಆಗದೇ ಇರಲಾರದು. ಕತೆ ಹಾಗೂ ಪಾತ್ರ ಎಂಬ ಎರಡೇ ಪದಗಳಲ್ಲಿ ಉತ್ತರಿಸುತ್ತಾರೆ ರಮೇಶ್ ಭಾಗವತ್.

ಅವರು ಅಂಥದೊಂದು ಪಾತ್ರ ಬರೆಯುವಾಗ, ಮನಸ್ಸಿಗೆ ಮೊದಲು ಹಾಗೂ ಕೊನೆಗೆ ಬಂದ ವ್ಯಕ್ತಿ ನಾನಾ ಪಾಟೇಕರ್. ಹಾಗಾಗಿ ಕಾಮನ್ ಸ್ನೇಹಿತರೊಬ್ಬರ ಮೂಲಕ ರಮೇಶ್ ಒಂದು ಕೈ ನೋಡಿದ್ದಾರೆ. 10 ವರ್ಷಗಳ ಹಿಂದೆ 'ಕನಸಲೂ ನೀನೆ, ಮನಸಲೂ ನೀನೆ' ಚಿತ್ರದಲ್ಲಿ ತೊಡಗಿಸಿಕೊಂಡಿದ್ದ ಸಮಯದಲ್ಲಿ ನಾನಾ ಸೆಟ್‌ಗೆ ಬಂದು ಒಂದು



ಗಂಟೆ ಕಳೆದಿದ್ದರಂತೆ. ಅವೆಲ್ಲವನ್ನೂ ನಾನಾಗೆ ನೆನಪಿಸುತ್ತಾ ತಮ್ಮನ್ನು ಪರಿಚಯಿಸಿಕೊಂಡಿದ್ದಾರೆ.

ನಂತರ ನಾನಾ ಕತೆ ಕೇಳಿದರಂತೆ. ಮೊದಲು ಸೂಕ್ಷ್ಮವಾಗಿ, ನಂತರ ಭೋಪಾಲ್‌ನಲ್ಲಿ 'ರಾಜನೀತಿ' ಚಿತ್ರೀಕರಣದಲ್ಲಿ ಬೀಡು ಬಿಟ್ಟಿದ್ದ ನಾನಾಗೆ ಪೂರ್ಣ ಕತೆ ಹೇಳಿದರಂತೆ ರಮೇಶ್. ನಾನಾ ಕತೆ ಒಪ್ಪಿದ್ದಷ್ಟೇ ಅಲ್ಲ, ಡಿಸೆಂಬರ್ ಅಥವಾ ಜನವರಿಯಲ್ಲಿ ತಮ್ಮ ಕಾಲ್‌ಶೀಟ್ ನೀಡಲಿದ್ದಾರೆ ಎಂದು ಖಚಿತಪಡಿಸಿದ್ದಾರೆ ರಮೇಶ್.

ಮಿಕ್ಕಂತೆ ಮಾಸ್ಟರ್ ಹಿರಣ್ಣಯ್ಯ, ಅತುಲ್ ಕುಲಕರ್ಣಿ, ಕಲಾಭವನ್ ಮಣಿ ಅಭಿನಯಿಸುತ್ತಿದ್ದಾರೆ. ಟಿ.ಪಿ. ಸಿದ್ದರಾಜು ಸಹ ಒಂದು ಪಾತ್ರ ಮಾಡುತ್ತಿದ್ದಾರಂತೆ. ಅನೂಪ್ ಸೀಳಿನ್ ಸಂಗೀತ ಚಿತ್ರಕ್ಕಿದೆ. ಚಿತ್ರೀಕರಣ ನವೆಂಬರ್‌ನಲ್ಲಿ ಪ್ರಾರಂಭವಾಗಲಿದೆ.

### ಆ ಬೆಟ್ಟ ಫಾರಿನ್‌ಗೆ ಹೋಗಿದೆ

'ಮುಖಪುಟ' ಚಿತ್ರವು ಇತ್ತೀಚೆಗಷ್ಟೇ ಒಂದೆರಡು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಮುಖಪುಟ ಅಲಂಕರಿಸಿದ್ದವು. ಈಗ ಕೋಡ್ಲು ರಾಮಕೃಷ್ಣ ನಿರ್ದೇಶನದ 'ಬೆಟ್ಟದಪುರದ ದಿಟ್ಟ ಮಕ್ಕಳು' ಎಂಬ ಚಿತ್ರ ಸಿಯಾಟಲ್‌ನಲ್ಲಿ ಅಕ್ಟೋಬರ್ ಎರಡರಿಂದ ನಾಲ್ಕರವರೆಗೂ ನಡೆಯಲಿರುವ ಸೌತ್ ಏಷ್ಯನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಭಾಗವಹಿಸುವುದಕ್ಕೆ ಗೊತ್ತಾಗಿದೆ.

ನಾ. ಡಿಸೋಜ ಬರೆದಿರುವ ಕಥೆಯನ್ನಾಧರಿಸಿ ನಿರ್ಮಾಣವಾದ ಚಿತ್ರ ಇದು. ಮೈನಿಂಗ್ ಧಿಕ್ಕರಿಸಿ ಬೆಟ್ಟದಪುರದ ಒಂದಿಷ್ಟು ದಿಟ್ಟ ಮಕ್ಕಳು ನಡೆಸುವ ಹೋರಾಟದ ಕಥೆ ಈ ಚಿತ್ರದಲ್ಲಿದೆ. ಎನ್.ಆರ್.ಐ. ಕನ್ನಡಿಗರಾದ ಹರ್ಷ ರಾಮ್ ಈ ಚಿತ್ರವನ್ನು ನಿರ್ಮಿಸಿದ್ದಷ್ಟೇ ಅಲ್ಲ, ಚಿತ್ರದಲ್ಲಿ ಮುಖ್ಯ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಮಿಕ್ಕಂತೆ ಶ್ರೀನಿವಾಸ ಮೂರ್ತಿ, ಪದ್ಮಾ ವಾಸಂತಿ, ಶೋಭ ರಾಜ್, ಬ್ಯಾಂಕ್ ಜನಾರ್ಧನ್, ಕರಿಬಸವಯ್ಯ ಮುಂತಾದವರು ಅಭಿನಯಿಸಿದ್ದಾರೆ.

ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಚಿತ್ರ ಪ್ರದರ್ಶನವಾಗುತ್ತಿದ್ದರೂ, ಪಿ.ವಿ.ಆರ್.ನಲ್ಲಿ ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದು ವಿಶೇಷ.




## ಸುದ್ದಿಸ್ವಾರಸ್ಯ



### 'ಕಾಯ'ಕದಿಂದ ಕೆಲಸ ಲಾಸ್!

ಪ್ಯಾರಿಸ್‌ನ ಸರ್ಕಾರಿ ಡ್ರೈವರ್ ಒಬ್ಬ ಮಾಡೆಲ್‌ಗಳ ಸಹವಾಸದಿಂದ ಸಸ್ಪೆಂಡ್ ಆಗಿದ್ದಾನೆ. ಆಗಿದ್ದೇನೂ ಇಲ್ಲ, ಕಳೆದ ವಾರ ಅಲ್ಲಿನ ಬಸ್‌ನಿಲ್ದಾಣದಲ್ಲಿ ಫ್ಯಾಷನ್ ಶೋ ರಿಹರ್ಸಲ್ ನಡೀತಿತ್ತು. ದುರದೃಷ್ಟವಷಾತ್ ಅವನಿಗೆ ಕಾಯಕದಲ್ಲೇ 'ಕೈಲಾಸ' ಕಾಣೋ ಯೋಗ ಸಿಕ್ಕಿತ್ತು. ದೃಷ್ಟಿ ಎಡಗಡೆ ಹೋಯ್ತು, ಗಾಡಿ ಮುಂದಿನ ಲೈಟ್ ಕಂಬಕ್ಕೆ ಗುದ್ದಿತ್ತು. ಮಾಡೆಲ್‌ಗಳನ್ನು ನಂಬ್ದೋರಷ್ಟೇ ಅಲ್ಲ, ನೋಡ್ದೋರಿಗೂ ಕರೆಂಟ್ ಶಾಕ್ ಗ್ಯಾರಂಟಿನೇ.



### ಬಿಯರ್ ಫೆಸ್ಟಿವಲ್

ವಿಶ್ವದ ಪ್ರಸಿದ್ಧ 'ಎಣ್ಣೆ ಮೇಷ್ಟ್ರು'ಗಳು ಕಾಣೆಯಾಗಿದ್ದಾರೆ! ಹೀಗಂತ ಅವ್ರನ್ನು ಹುಡ್ಕೋದಿಕ್ಕೆ ಜಾಹೀರಾತು ಕೊಟ್ರೆ, ಜರ್ಮನಿಯ ಮ್ಯೂನಿಚ್ ನಗರದಿಂದ ತೀಕ್ಷ್ಣ ಪ್ರತಿಕ್ರಿಯೆ ಬಂದೀತು. ಈಗ ಅಲ್ಲಿ 'ಬಿಯರ್ ಫೆಸ್ಟಿವಲ್' ನಡೀತಿದೆ. ನಾನಾ ದೇಶದ ಹೈಟೆಕ್ ಮದ್ಯಪ್ರಿಯರು ಪಾಲ್ಗೊಂಡಿದ್ದಾರೆ. ಇನ್ನೂ ಎರಡು ವಾರ ನಡೆಯುವ ಈ ಫೆಸ್ಟ್‌ಗೆ ಮ್ಯೂನಿಚ್ ಮೇಯರ್ ಕ್ರಿಶ್ಚಿಯನ್ ಉದೆ ಬ್ಯಾರೆಲ್ ಲೀ. ಬಿಯರ್ ಬಾಟಲಿಯ ಟ್ಯಾಪ್ ಓಪನ್ ಮಾಡುವ ಮೂಲಕ ಚಾಲನೆ ನೀಡಿದರಂತೆ. ಯಜಮಾನ್ರು ಫಾರಿನ್ ಟೂರ್ ಹೊರಟ್ರೆ, ಡೌಟ್ ಪಡೋದ್ರಲ್ಲಿ ತಪ್ಪೇನೂ ಇಲ್ಲ.

### ಕೂಸು ಬಡವಾದವು!

ಈ ಚಿತ್ರ ಗಮನಿಸಿದರೆ ಬಹುಶಃ ನಮ್ಮ ಕಾನೂನು ತಜ್ಞರಿಗೆ ಶೀಘ್ರ ನ್ಯಾಯ ವಿಲೇವಾರಿಗೆ ಐಡಿಯಾ ಸಿಕ್ಕಬಹುದು! 'ಕಿಡ್ ಜಾನಿಯಾ' ಪ್ರಾಜೆಕ್ಟ್ ಹೆಸರಲ್ಲಿ ಜಪಾನ್ ಸರ್ಕಾರ ಮಕ್ಕಳಿಗೆ ವಿಶೇಷ ಯೋಜನೆ ರೂಪಿಸಿದೆ. ಫೈರಿಂಗ್, ಪೈಲಟ್, ಡಾಕ್ಟರ್, ಜಡ್ಜ್‌ಗಿರಿ ಸೇರಿದಂತೆ 50 ವಿವಿಧ ವೃತ್ತಿ ಅನುಭವವನ್ನು ಮಕ್ಕಳಿಗೆ ಈಗಲೇ ನೀಡಲಾಗುತ್ತಿದೆ. 2020ರ ವೇಳೆಗೆ ನಂ.1 ಸ್ಥಾನಕ್ಕೆ ಪೈಪೋಟಿ ಸಂಕಲ್ಪ ತೊಟ್ಟಿರುವ ಜಪಾನ್ ಮಕ್ಕಳನ್ನು ಈಗಿನಿಂದಲೇ ಟ್ರೈನ್‌ಅಪ್ ಮಾಡುತ್ತಿದೆ. ಸಾಧನೆಯ ಕನಸಿನ ಮಧ್ಯೆ ಪಾಪ ಕೂಸು ಬಡವಾಯಿತು!



### ನೋಡ ಬನ್ನಿ ಧ್ವಜ ಶಿರಾರೋಹಣ



ಪಕ್ಕದ ದೇಶದ ಗಡಿಗೆ ಕತ್ತರಿ ಹಾಕಿ ಫ್ಲ್ಯಾಗ್ ಹಾರಿಸುವ ಚೀನಿಯರ ಕಣ್ಣು ಸದ್ಯಕ್ಕೆ ಅವರ ತಲೆ ಮೇಲೆಯೇ ಬಿದ್ದಂತಿದೆ. 'ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ' ಸರ್ಕಾರ ಅಸ್ತಿತ್ವಕ್ಕೆ ಬಂದು ಅಕ್ಟೋಬರ್‌ಗೆ 60 ವರ್ಷವಾಯಿತು. ಈ ನೆ(ನ)ಪಲ್ಲಿ ದೇಶ ಪ್ರೇಮ ಮೆರೆಯಲು ಹೊರಟ ಚೀನಿಯರು ಟಯಾನ್ಮನ್ ಗೇಟ್‌ನ ಬಾರ್ಬರ್ ಶಾಪಿನಲ್ಲಿ ತಮ್ಮ ಕೂದಲು ಬಲಿಕೊಟ್ಟು, ಕೇಶ ಧ್ವಜಾರೋಹಣ ನೆರವೇರಿಸುತ್ತಿದ್ದಾರೆ. ಏಕಪಕ್ಷೀಯ ವ್ಯವಸ್ಥೆಯನ್ನೇ ನಂಬಿ ಉಸಿರಾಡುತ್ತಿರುವ ಕಮ್ಯುನಿಸ್ಟ್ ರಾಷ್ಟ್ರ 60ರ ಸಂಭ್ರಮಕ್ಕೆ ಸಕಲ ಸಿದ್ಧತೆ ನಡೆಸುತ್ತಿದೆ. ಇನ್ನು ಚೀನಿಯರನ್ನು ಗುರುತು ಹಿಡಿಯೋದು ತುಂಬಾ ಸುಲಭ!

### ನಾಯಿ ನ್ಯೂಸ್

ಕಟುಕನನ್ನು ಕತ್ತರಿಸಿ ಪಾಪ ಕುರಿ ತಪ್ಪಿಸಿಕೊಂಡು ಬಂದಿದೆ, ಅದು ಮೀಡಿಯಾದವರಿಗೆ ಎಕ್ಸ್‌ಕ್ಲ್ಯೂಸಿವ್ ಆಗಿದೆ ಅಂದ್ಕೋಬೇಡಿ. ಇದು ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಮನೆಯ ನಾಯಿ. ವೈಟ್‌ಹೌಸ್‌ನ ರೋಸ್ ಗಾರ್ಡನಲ್ಲಿ ಇದು ಇದ್ದಕ್ಕಿದ್ದಂತೆ ತಪ್ಪಿಸಿಕೊಂಡಿತ್ತು. ಜವಾನರಿಗೆ ಕೊನೆಗೂ ನಾಯಿ ಸಿಕ್ತು, ಟಿವಿಯವರಿಗೆ ಅರ್ಧ ದಿನದ ನ್ಯೂಸ್ ಕೂಡ ಆಯ್ತು. ನೋಡಿ ಕೊನೆ ಪಕ್ಷ ದೊಡ್ಡವರ ಮನೇಲಿ ನಾಯಿಯಾಗಿ ಹುಟ್ಟಿದ್ರೂ ರಾತ್ರೋರಾತ್ರಿ ಫೇಮಸ್ ಆಗ್ಬಹುದು!



● ಈ ಪುಟಕ್ಕೆ ಎಸ್‌ಎಂಎಸ್, ತುಣುಕು, ಜೋಕ್ ಪೀಸ್‌ಪೀಸ್ ಐಟಂಗಳನ್ನು ಕಳುಹಿಸಬಹುದಾದ ವಿಳಾಸ: dinachari@gmail.com., 9243482562

## ನಿತ್ಯ ಪ್ರಭ 5273

■ **ಎಡದಿಂದ ಬಲಕ್ಕೆ:**
1.ಪಾರವೇ ಇಲ್ಲದುದು (3)
3.ಮೊಸಳೆಯಲ್ಲಿ ತೆರಿಗೆ ಸೇರಿದೆ (3)
5.ಭೇದಿಯ ಇನ್ನೊಂದು ಹೆಸರು (4)
7.ಮರ ಕೊಯ್ಯುವುದಕ್ಕೆ ಇದು ಬೇಕು (4)
9.ಸಂಗೀತದಲ್ಲಿ ಬಾರಿಸುವ ಸಾಧನ (3)
10.ಸಿಖ್ಖರಲ್ಲಿಯ ಒಂದು ಗುಂಪು (4)
12.ದೇವರು (4)
14.ಬೋಧಿಸುವುದು (3)
15.ತಂದೆ (3)

■ **ಮೇಲಿನಿಂದ ಕೆಳಕ್ಕೆ:**
2.ಶಿವನ ಹೆಂಡತಿ (3)
4.ಕಲಶ ಹೊತ್ತು ಆಚರಿಸುವ ಹಬ್ಬ (3)
5.ಕುಮಟಾ ಬಳಿ ಸಮುದ್ರ ಸೇರುವ ಹೊಳೆ (5)
6.ಬೆಳ್ಳಿ ಬೆಟ್ಟ (5)
7.ತಾವರೆ ಹೊಕ್ಕುಳಾಗಿ ಉಳ್ಳವ (5)
8.ಮಟ್ಟವನ್ನು ಕಾಯ್ದುಕೊಂಡ ಸ್ಥಿತಿ (5)
11.ದೇವರ ಮುಂದೆ ಹಾಕುವ ಚಿತ್ತಾರ (3)
13.ಬಲಿಯನ್ನು ತುಳಿದವನು (3)




**ಉತ್ತರ ನಿತ್ಯಪ್ರಭ – 5272–ಎಡದಿಂದ ಬಲಕ್ಕೆ–** 1.ಮೃತ್ಯುಂಜಯ, 3.ಪಾಯಿಜಾಮ, 5.ಕ್ಷತ್ರಿಯ, 6.ರಸಾಯನ, 8.ನೆರೆಮನೆ, 10.ಸತ್ಯಭಾಮ, 12.ಸ್ವರ್ಣಗಿರಿ, 14.ರಾಜೀವ, 15.ತಿರಿಗಣಿ, 16.ರವಿವಾರ.

**ಮೇಲಿನಿಂದ ಕೆಳಕ್ಕೆ–** 1.ಮೃಗಶಿರ, 2.ಯಕ್ಷಗಾನ, 3.ಪಾಯಖಾನೆ, 4.ಮಲೆಮನೆ, 7.ಸಾಹಿತ್ಯ, 9.ಮಳಿಗಿ, 10.ಸರಸ್ವತಿ, 11.ಮಹಾರಾಣಿ, 12.ಸ್ವಯಂವರ, 13.ರಿಸಾಲ್ದಾರ.

## ಕಿರುನಗೆ



ಪ್ರಾಣಿಗಳ ಕುರಿತು ಪಾಠ ಮಾಡುತ್ತಿದ್ದ ಟೀಚರ್ ಪ್ರಾಣಿಗಳ ಬಗ್ಗೆ ಪ್ರೀತಿ ತೋರಿಸಬೇಕು ಎಂದು ತರಗತಿಯಲ್ಲಿದ್ದ ಮಕ್ಕಳಿಗೆ ಬುದ್ಧಿ ಹೇಳಲಾರಂಭಿಸಿದರು.

ಆಮೇಲೆ..

**ಟೀಚರ್** : ಈಗ ರಸ್ತೆಯಲ್ಲಿ ಯಾರೋ ಒಬ್ಬ ಕತ್ತೆಯನ್ನು ಚೆನ್ನಾಗಿ ಹೊಡೆಯುತ್ತಿರುತ್ತಾನೆ. ನಾನು ಅದನ್ನು ತಪ್ಪಿಸಿದೆ ಅಂದ್ರೆ ಇದು ಏನನ್ನು ತೋರಿಸುತ್ತೆ..?

**ಕೋಲ್ಯ** : ಸೋದರ ಪ್ರೀತಿ ಮೇಡಂ...

● ಜೋಕೇಶ

## ಕಿರುಮಾಹಿತಿ

### ಹಾವಲ್ಲ, ಇದು ವಿಷ ಪೂರಿತ ಹಕ್ಕಿ

ಹಾವು ಕಚ್ಚಿದರೆ ಸಾಯುವುದನ್ನು ಕೇಳಿರುತ್ತೀರಿ. ಆದರೆ ಹಕ್ಕಿ ಕಚ್ಚಿದರೆ ಸಾಯುವುದು ಅಥವಾ ಕಾಯಲೆ ಬೀಳುವುದನ್ನು ಕೇಳಿದ್ದೀರಾ? ಹೂಡೆಡ್ ಪಿಟೋಹುಯ್ ಅಂಥ ಹಕ್ಕಿ. ಈ ಹಕ್ಕಿಯಲ್ಲಿ ವ್ಯಕ್ತಿಯನ್ನು ಕೊಲ್ಲಬಲ್ಲ ವಿಷ ಇರುವ ಸಾಧ್ಯತೆಯಿದೆ ಎಂಬುದು ಗಮನಕ್ಕೆ ಬಂದಿದೆ. ಚಿಕಾಗೋ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಜಾನ್ ಡಮ್ ಬೇಕರ್ ಎಂಬುವರು ಬಲೆಯೊಳಗಿದ್ದ ಹೂಡೆಡ್ ಎಂಬ ಈ ಹಕ್ಕಿಯ ವಿಷದ ಅನುಭವ ಹಾಗಿದ್ದುಸ್ವತಃ ಜಾನ್ ಅವರಿಗೆ. ಬಲೆಗೆ ಬಿದ್ದಿದ್ದ ಹಕ್ಕಿಯನ್ನು ಹೊರತೆಗೆಯಲು ಹೋದಾಗ ಆ ಹಕ್ಕಿ ಅವರನ್ನು ಪರಚಿ ಅವರನ್ನು ಕುಕ್ಕಿತು. ಅವರು ಗಾಯವನ್ನು ನಾಲಗೆಯಿಂದ ನೆಕ್ಕಿದರು. ತುಟಿ ಮರಗಟ್ಟಿತು. ಕೊನೆಗೆ ಆ ಹಕ್ಕಿ ಎಷ್ಟು ವಿಷಕಾರಿ ಎಂದು ತಿಳಿಯಲು ಹಕ್ಕಿಯ ವಿಷವನ್ನು ಇಲಿಯ ದೇಹದ ಮೇಲೆ ಪ್ರಯೋಗಿಸಿದಾಗ ಇಲಿ ಸತ್ತಿತು. ಕಿತ್ತಳೆ ಹಾಗೂ ಕಪ್ಪು ಮಿಶ್ರಿತ ಮೈ ಬಣ್ಣವಿರುವ ಹಕ್ಕಿ ನ್ಯೂಗಿನಿ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಇದರ ಚರ್ಮದಲ್ಲೇ ಅಪಾಯಕಾರಿಯಾದ ನ್ಯೂರೋ ಟಾಕ್ಸಿನ್ ಮತ್ತು ಹೋಮೋಬ್ಯಾಟ್ರಕೊಟಾಕ್ಸಿನ್ ರಾಸಾನಿಯಕಗಳು ಪತ್ತೆಯಾಗಿವೆ.

## ಸು-ಡೊಕು - 1523

ಮಟ್ಟ = ಮಧ್ಯಮ –ರವಿಶಂಕರ್ ಭಟ್

| | | | | | | | | |
|---|---|---|---|---|---|---|---|---|
| | | | 5 | 8 | | | 9 | 6 |
| 8 | 9 | | | | | 5 | | |
| 2 | | 1 | | | 7 | | 3 | |
| 3 | | | 1 | 2 | | | 4 | |
| | | | 6 | | 5 | | | |
| | 1 | | | 9 | 4 | | | 3 |
| | 4 | | 8 | | | 2 | | 9 |
| | | 5 | | | | | 1 | 8 |
| 6 | 2 | | | 1 | 9 | | | |

● ಮೇಲಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿನಲ್ಲೂ 1ರಿಂದ 9ರವರೆಗಿನ ಎಲ್ಲಾ ಅಂಕಿಗಳೂ ಇರಬೇಕು. ಎಲ್ಲ ಸಾಲಿನಲ್ಲೂ ಅಂಕಿಯನ್ನು ಒಮ್ಮೆ ಮಾತ್ರ ಬಳಸಿರಬೇಕು.

● ಅದೇ ರೀತಿ, 3 X 3 ಉಪ ಚೌಕಳಿಗಳಲ್ಲೂ 1 ರಿಂದ 9ರ ವರೆಗಿನ ಎಲ್ಲಾ ಅಂಕಿಗಳೂ ಇರಬೇಕು.

■ **ಉತ್ತರಕ್ಕೆ ಕ್ರೀಡಾಪುಟ ನೋಡಿ...**

## ಕಿರುತೆರೆ

### ಅನಸೂಯಾ ಶಾರದೆಗೆ ಬಿಟ್ಟ ಬಾಣವೇ ತಿರುಗುಬಾಣವಾಗುತ್ತಾ?



ಅವಳಿಗೆ ಅವಳ ಮಗು ಬೇಕು. ಅತ್ತೆಗೆ ತನ್ನ ಮಾಂಗಲ್ಯ ಬೇಕು. ಇಬ್ಬರೂ ತಮಗೆ ಬೇಕಾಗಿದ್ದನ್ನು ಉಳಿಸಿಕೊಳ್ಳಲು ಒಂದು ಹೋರಾಟವನ್ನೇ ನಡೆಸುತ್ತಿದ್ದಾರೆ. ಯಾರ ಬಗ್ಗೆ ಹೇಳುತ್ತಿರಬಹುದು ಅನ್ನೋ ಕುತೂಹಲ ಕಾಡುತ್ತಿದ್ದೆಯೇ? ಅದೇ ನಮ್ಮ ಚಿತ್ರಾಪುರದ ಶಾರದೆಯ ಬಗ್ಗೆ, ಶಾರದೆಗೆ ತನ್ನ ಹೊಟ್ಟೆಯಲ್ಲಿರುವ ಎರಡನೇ ಮಗು ಬೇಕು. ಆದರೆ ಅತ್ತೆಗೆ ಬೇಡ, ಆ ಮನೆಗೆ ಎರಡನೇ ಹೆಣ್ಣುಮಗು ಬಂದರೆ, ಗಂಡಾಂತರ ತಪ್ಪಿದ್ದಲ್ಲ ಅಂತ ಶಂಕರಶಾಸ್ತ್ರಿ ಹೇಳಿ ಬಿಟ್ಟಿದ್ದಾರೆ. ಅತ್ತೆಗೆ, ಅವರು ಮಾತು ವೇದ ವಾಕ್ಯ.ಶಾರದೆಗೆ ತನ್ನ ಮಗುವೇ ಸರ್ವಸ್ವ.

ತನ್ನ ಮಗು ಈ ಪ್ರಪಂಚಕ್ಕೆ ಬಂದರೆ, ಮಾವನ ಜೀವಕ್ಕೆ ಅಪಾಯವಿದೆ ಎಂಬುದು ಗೊತ್ತಿದ್ದರೂ, ಅದನ್ನು ಉಳಿಸಿಕೊಳ್ಳಲು ಹೊರಟಿದ್ದಾಳೆ ಎಂಬುದು ಅತ್ತೆಗೆ ಸಹ್ಯವಾಗುತ್ತಿಲ್ಲ. ಇದರಿಂದ ಅತ್ತೆಯೆದುರು ಶಾರದಾ ಕೆಟ್ಟವಳಾಗಿದ್ದಾಳೆ. ತಾನು ಎಷ್ಟೇ ರೇಗಾಡಿದರೂ, ಸಿಟ್ಟು ಮಾಡಿಕೊಂಡರೂ, ಶಾರದಾ ಪಟ್ಟು ಸಡಿಲಿಸುತ್ತಿಲ್ಲ ಎಂಬುದನ್ನರಿತ ಅತ್ತೆ ಒಂದು ಮಾಸ್ಟರ್ ಪ್ಲಾನ್ ರೆಡಿ ಮಾಡ್ತಾರೆ. ನಿಜವಾಗಿ ಹೇಳುವುದಾದರೆ, ಇದು ಶಂಕರ ಶಾಸ್ತ್ರಿಗಳ ಮಾತಿನ ಪ್ರಭಾವ ಎಂದರೆ ತಪ್ಪಾಗಲಾರದು. ತನ್ನ ಈ ಪ್ಲಾನ್‌ನ ಪ್ರಯೋಗದಿಂದ ಶಾರದೆ ಹೆದರಿ ಬಿಡುತ್ತಾಳೆ ಅಂಥ ಅತ್ತೆ ಯೋಚಿಸುತ್ತಾರೆ.

ಅತ್ತೆ ತನ್ನ ಪ್ಲಾನನ್ನು ಕಾರ್ಯರೂಪಕ್ಕೆ ತರುತ್ತಾರೆ. ನಿನ್ನ ಮಗುವನ್ನು ಉಳಿಸಿಕೊಳ್ಳಲೇಬೇಕು ಎಂಬ ಹಠ ನಿನಗಿದ್ದರೆ, ನೀನು ಈ ಮನೆ ಬಿಟ್ಟು ಹೋಗಬೇಕು ಎನ್ನುತ್ತಾರೆ. ಶಾರದೆ ಒಂದು ಕ್ಷಣಕ್ಕೆ ಥರಗುಟ್ಟಿ ಹೋಗುತ್ತಾಳೆ. ಆದರೆ ಕರುಳ ಕುಡಿಯ ಮೇಲಿನ ಮಮತೆ ಅವಳನ್ನು ಬೇರೆ ಮನೆ ಮಾಡುವ ಬಗ್ಗೆ ಯೋಚಿಸುವಂತೆ ಮಾಡಿತ್ತು. ತನ್ನ ಯೋಚನೆಯನ್ನು ಗಂಡನ ಬಳಿ ಹೇಳಿಕೊಳ್ಳುತ್ತಾಳೆ. ಒಮ್ಮ ಗಂಡ ನಿರಾಕರಿಸಿದರೂ, ಮತ್ತೆ ಅಮ್ಮನ ಬಳಿ ಕೇಳಿ ನೋಡ್ತೇನೆ ಅಂತಾನೆ. ಅದೇ ರೀತಿ ತಾಯಿ ಬಳಿ ಈ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಇದರಿಂದ ಅತ್ತೆಗಾಬರಿಯಾದದ್ದಂತೂ ನಿಜ. ತಾನು ಪ್ರಯೋಗಿಸಿದ ಬಾಣಕ್ಕೆ ಹೆದರಿ, ತನ್ನ ತಾಳಕ್ಕೆ ತಕ್ಕಂತೆ ಕುಣೀತಾಳೆ ಅಂದುಕೊಂಡಿದ್ದ ಅತ್ತೆಗೆ, ತಾನು ಬಿಟ್ಟ ಬಾಣವೇ, ತನಗೆ ತಿರುಗು ಬಾಣವಾಗಿ ಪರಿಣಮಿಸುತ್ತೆ ಅನ್ನೋ ಕಲ್ಪನೆ ಕೂಡ ಇರಲಿಲ್ಲ. ಮುಂದೆ ಕಥೆ ಯಾವ ರೀತಿ ತಿರುವನ್ನು ಪಡೆಯಬಹುದು? ಶಾರದಾ ಬೇರೆ ಮನೆ ಮಾಡ್ತಾಳ? ಅಲ್ಲ ಅತ್ತೆ ತನ್ನ ಮಾತನ್ನು ವಾಪಸ್ಸು ತೆಗೆದುಕೊಂಡು ತೆಪ್ಪಗಾಗಬಹುದಾ? ಇವೆಲ್ಲದ್ದಕ್ಕಾಗಿ ವೀಕ್ಷಿಸಿ, ನಮ್ಮಮ್ಮ ಶಾರದೆ, ನಿಮ್ಮ ಝೀ ಕನ್ನಡದಲ್ಲಿ...



**ನಮ್ಮಮ್ಮ ಶಾರದೆ ಪ್ರಸಾರದ ಸಮಯ: ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 8 ಗಂಟೆಗೆ**

## ನಿತ್ಯ ಭವಿಷ್ಯ

■ **ಮೇಷ:** ಆರೋಗ್ಯ ಉತ್ತಮವಾಗಿರುವುದು. ನೀವು ಅಜ್ಜಿಯಾಗುವ ವಿಷಯ ಕೇಳಿ ಸಂತೋಷವಾಗುವುದು. ಮನೆಯಲ್ಲಿ ಶಾಂತಿ.

■ **ವೃಷಭ:** ಮಾನಸಿಕ ಹಿಂಸೆ. ಕೆಲಸ ಕಾರ್ಯಗಳಲ್ಲಿ ಒತ್ತಡ. ಅನಾವಶ್ಯಕ ತಿರುಗಾಟ. ಮನೆ ಕಾರ್ಯದಲ್ಲಿ ಚಿಂತೆ ಕಾಡಬಹುದು.

■ **ಮಿಥುನ:** ವಿದ್ಯಾರ್ಥಿಗಳು ಓದಿನಲ್ಲಿ ಜಯ ಸಾಧಿಸುವರು. ವ್ಯಾಪಾರದಲ್ಲಿ ಅಧಿಕ ಬಂಡವಾಳ ಹೂಡುವಿರಿ. ಧನ ಸಹಾಯ.

■ **ಕಟಕ:** ಮನೆಯಲ್ಲಿ ಶುಭ ಕಾರ್ಯಗಳು ಜರಗುವುವು. ಶತ್ರು ದೂರ. ಮನೆ ಅಲಂಕಾರ ವಸ್ತುಗಳ ಖರೀದಿ.

■ **ಸಿಂಹ:** ಸ್ಥಿರ ಆಸ್ತಿಯಿಂದ ಲಾಭ.ಹಿರಿಯರ ಆದೇಶದಂತೆ ನಡೆಯಿರಿ. ಉತ್ತಮ ಆರೋಗ್ಯ.

■ **ಕನ್ಯಾ:** ನ್ಯಾಯಾಲಯದಿಂದ ತೊಂದರೆ. ಕೆಲಸ ಕಾರ್ಯಗಳಲ್ಲಿ ವಿಘ್ನ ಉಂಟಾಗುವುದು.

■ **ತುಲಾ:** ಕುಟುಂಬದಲ್ಲಿ ಅನ್ಯೋನ್ಯತೆ. ಮುಖಂಡರೊಂದಿಗೆ ಮಾತುಕತೆ ನಡೆಸುವಿರಿ. ಹಿಡಿದ ಕೆಲಸ ಪೂರ್ತಿ ಮಾಡುವಿರಿ. ಅನಾರೋಗ್ಯ.

■ **ವೃಶ್ಚಿಕ:** ಬ್ಯಾಂಕಿನಲ್ಲಿ ಸಾಲಕ್ಕಾಗಿ ಅರ್ಜಿ ಹಾಕುವಿರಿ. ಉದ್ಯೋಗದಲ್ಲಿ ಅಧಿಕಾರಿಗಳೊಂದಿಗೆ ಮಾತಿನ ಚಕಮಕಿ. ಕಾರ್ಯಗಳು ನಿಧಾನವಾಗುವುವು.

■ **ಧನುಸ್ಸು:** ಸಹೋದರಿಗೆ ಗಂಡು ಮಗುವಾಗುವುದು. ನೆರೆಹೊರೆಯವರ ಸಹಾಯ ಸಿಕ್ಕುವುದು. ಅಧಿಕಾರ ಪ್ರಾಪ್ತಿ. ಸಮಾಜ ಸೇವೆ ಮಾಡುವಿರಿ.

■ **ಮಕರ:** ತಾಯಿ ಜತೆ ಮಾತುಕತೆ. ಮಗಳ ಮದುವೆಗೆ ಚಿನ್ನಾಭರಣ ಖರೀದಿ. ನಿವೇಶನ ಖರೀದಿಗೆ ಯತ್ನ.

■ **ಕುಂಭ:** ವಿದೇಶದಲ್ಲಿರುವ ಮಗಳಿಂದ ಶುಭ ವಾರ್ತೆ. ಪತಿ ಉದ್ಯೋಗದಲ್ಲಿ ಬದಲಾವಣೆ ಸಂಭವ.

■ **ಮೀನ:** ಕೆಲಸ ಕಾರ್ಯಗಳು ಸರಳವಾಗಿ ನಡೆಯುವುವು. ಆರೋಗ್ಯದ ಕಡೆ ಗಮನ ಕೊಡಿ.